ಉಡುಪಿ ಪುರಸಭೆಯ ಒಳಚರಂಡಿ ವ್ಯವಸ್ಥೆ

553 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿರುವುದರಿಂದ ಅಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸೂಚನೆ ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಸಂಪೂರ್ಣ ದುರಸ್ಥಿಯಲ್ಲಿರುವ ಉಡುಪಿ ಒಳಚರಂಡಿ ವ್ಯವಸ್ಥೆಯನ್ನು ಪುನಃ ಸುಸ್ಥಿತಿಗೆ ತರುವ ಯೋಜನೆ ಸರಕಾರದ ಮುಂದಿದೆಯೇ;

ಇ) ಇದ್ದಲ್ಲಿ ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ಒಳಚರಂಡಿಯನ್ನು ಸುಸ್ಥಿತಿಯಲ್ಲಿಡಲು ರೂ. 25.00 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲು ಪುರಸಭೆಯು ಉದ್ದೇಶಿಸಿದೆ.

ನಗರಸಭೆಗಳ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ.

554 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರ ಸಭೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗಳನ್ನು ಹಸ್ತಾಂತರಿಸಿದ ಮೇಲೆ ಸರ್ಕಾರ ಸದರಿ ನಗರಸಭೆಗಳಿಗೆ ಹೆಚ್ಚುವರಿ ಅನುದಾನ ನೀಡಿದೆಯೇ?

ಆ) ರಾಜ್ಯದಲ್ಲಿ ಯಾವ ಯಾವ ನಗರ ಸಭೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಹಸ್ತಾಂತರಿಸಲಾಗಿದೆ. ವಿವರ ಒದಗಿಸುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯ ಸರ್ಕಾರವು ನಗರಸಭಗಳಿಗೆ ಅಭಿವೃದ್ಧಿ ಅನುದಾನ ನೀಡುತ್ತಿದೆ. ಅದನ್ನು ನೀರು ಸರಬರಾಜು ನಿರ್ವಹಣೆಗೆ ಬಳಸಿಕೊಳ್ಳಬಹುದಾಗಿದೆ. ನೀರು ಸರಬರಾಜು ನಿರ್ವಹಣೆಗೆಂದೇ ಹೆಚ್ಚುವರಿ ಅನುದಾನ ನೀಡಿರುವುದಿಲ್ಲ.

ಆ) ಈ ಕೆಳಕಂಡ ಸ್ಥಳೀಯ ಸಂಸ್ಥೆಗಳಿಗೆ ನೀರು ಸರಬರಾಜು:ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆಯನ್ನು ಮಂಡಳಿಯಿಂದ ಯೋಜನೆಯ ಕಾರ್ಯವನ್ನು ಮುಗಿಸಿ ಹಸ್ತಾಂತರ ಮಾಡಿದೆ.

ನೀರು ಸರಬರಾಜು ನಿರ್ವಹಣೆ

1.	ಚಿಕ್ಕಮಗಳೂರು ನಗರಸಭೆ	ಚಿಕ್ಕಮಗಳೂರು ನೀರು ಸರಬರಾಜು
2.	ಉಡುಪಿ ಪುರಸಭೆ	ಉಡುಪಿ ನೀರು ಸರಬರಾಜು
3.	ಬೈಂದೂರು ಪುರಸಭೆ	ಬೈಂದೂರು ನೀರು ಸರಬರಾಜು
4.	ಸುಳ್ಯ ಮಂಡಲ ಪಂಚಾಯತ್	ಸುಳ್ಯ ನೀರು ಸರಬರಾಜು
5.	ಚನ್ನರಾಯಪಟ್ಟಣ ಪುರಸಭೆ	ಚನ್ನರಾಯಪಟ್ಟಣ ನೀರು ಸರಬರಾಜು ಯೋಜನೆ
6.	ಬೆಳ್ತಂಗಡಿ ಪುರಸಭೆ	ಬೆಳ್ತಂಗಡಿ ನೀರು ಸರಬರಾಜು ಯೋಜನೆ
7.	ಬೀರೂರು ಪುರಸಭೆ	ಬೀರೂರು ನೀರು ಸರಬರಾಜು.

ಒಳಚರಂಡಿ ನಿರ್ವಹಣೆ

1.	ಮಂಗಳೂರು ಮಹಾನಗರ ಪಾಲಿಕೆ	ಮಂಗಳೂರು ಒಳಚರಂಡಿ ವ್ಯವಸ್ಥೆ
2.	ಚಿಕ್ಕಮಗಳೂರು ನಗರಸಭೆ	ಚಿಕ್ಕಮಗಳೂರು ಒಳಚರಂಡಿ ವ್ಯವಸ್ಥೆ
3.	ಉಡುಪಿ ಪುರಸಭೆ	ಉಡುಪಿ ಒಳಚರಂಡಿ ವ್ಯವಸ್ಥೆ

ಹುಬ್ಬಳ್ಳಿ- ಧಾರವಾಡ ನಗರಗಳಲ್ಲಿ ಹೊಸ ಮಾರ್ಗಗಳ ರಚನೆ

557 - ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ -ಹುಬ್ಬಳ್ಳಿ ಮಹಾನಗರದ ಬೆಳವಣಿಗೆಯ ದೃಷ್ಟಿಯಿಂದ ಹೊಸ ಮಾರ್ಗಗಳನ್ನು ರಚಿಸುವ ಯೋಜನೆ ಏನಾದರೂ ಇದೆಯೇ; ಇದ್ದರೆ ಅದರ ಪೂರ್ಣ ವಿವರ ನೀಡುವುದು?

ಆ) ಹುಬ್ಬಳ್ಳಿ ರೈಲ್ವೆ ಗೂಡ್ಸ ಶೆಡ್ ಚಿಕ್ಕದಾಗಿರುವುದರಿಂದ ಅಮರಗೋಳ ಮಾರುಕಟ್ಟೆಯ ಹತ್ತಿರ ಗೂಡ್ಸ ಶೆಡ್ ನಿರ್ಮಿಸುವ ಯೋಜನೆ ಮಾಡುವಿರಾ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಈ ರೀತಿಯ ಪ್ರಸ್ತಾವನೆ ಇರುವುದಿಲ್ಲ.

12.40 ಪಿ.ಎಂ.

"ಸಭೆಯ ಮುಂದಿಡಲ್ಪಾಗುವ ಕಾಗದಪತ್ರಗಳ ಪಟ್ಟಿ"

I. ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)ರವರ ಪರವಾಗಿ :